**ಆ) ಈ ಕೆಳಗಿನ ಸಂಭಾಷಣೆಯನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.**

**ವಿದ್ಯಾರ್ಥಿ:** ನಮಸ್ಕಾರ ರಂಗಣ್ಣ. ಏನು ಇವತ್ತು ಇಷ್ಟೊತ್ತಿಗೆ ಎಲ್ಲೋ ಹೊರಟಿದ್ದೀರಿ?

**ರಂಗಣ್ಣ:** ಇನ್ನೇನಪ್ಪ ಮಗು, ನಮ್ಮ ರೈತರ ಪಾಡು ನಿಮಗೆ ಗೊತ್ತಲ್ಲ. ಈಗ ಹೋಗಿ ಪೈರು ನಾಟಿ ಮಾಡಲಿಕ್ಕೆ ಪ್ರಾರಂಭಿಸಿದರೆ ಬಿಸಿಲು ನೆತ್ತಿ ಮೇಲೆ ಬರೊವಷ್ಟರಲ್ಲಿ ಕೆಲಸ ಮುಗಿಸಬಹುದು. ಇಲ್ಲದಿದ್ದರೆ ನೆತ್ತಿ ಸುಡುತ್ತೆ ಕಣಪ್ಪ.

**ವಿದ್ಯಾರ್ಥಿ:** ರಂಗಣ್ಣ ಎಲ್ಲಾ ರೈತರು ನಿನ್ನಂಗೆ ಕಷ್ಟಪಡಬೇಕಾ?

**ರಂಗಣ್ಣ:** ಊ ಕಣಪ್ಪ. ಇಲ್ಲದಿದ್ದರೆ ಹೊಟ್ಟಗೆ ತಣ್ಣೀರ ಬಟ್ಟೆ ಹಾಕೊಬೇಕಾಗುತ್ತೆ ಕಣಪ್ಪಾ?

**ವಿದ್ಯಾರ್ಥಿ:** ಹೌದು ರಂಗಣ್ಣ. ನೀವು ಮಾತ್ರ ಅಲ್ಲ ಇಡೀ ದೇಶವೇ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕೊಬೇಕಾಗುತ್ತೆ. ರಂಗಣ್ಣ: ಅದು ಹೇಗೆ ಕಂದಾ?

**ವಿದ್ಯಾರ್ಥಿ:** ಹೌದು ರಂಗಣ್ಣ, ಏಕೆಂದರೆ ರೈತರಾದ ನೀವುಗಳೇ ನಮ್ಮ ದೇಶದ ಬೆನ್ನೆಲುಬು. ನೀವುಗಳು ಕಷ್ಟಪಟ್ಟು ಹೊಲ, ಗದ್ದೆಗಳಲ್ಲಿ ದುಡಿಯದಿದ್ದರೆ ಯಾವುದೇ ಬೆಳೆ ಬರದೆ ಇಡೀ ದೇಶವೇ ಹಸಿವಿನಿಂದ ನರಳಾಡಬೇಕಾದಿತು.

**ರಂಗಣ್ಣ:** ಹೋ ಹಾಗಾ....!

| |
|---|
| |
| |
| |
| |
| |
| |
| |
| |
| |

**ಮೌಲ್ಯಮಾಪನ ಸೂಚಿ**

| ಕ್ರ.ಸಂ | ಮಾನಕಗಳು<br>ಅಂಕಗಳ ವಿತರಣೆ : ಅತ್ಯುತ್ತಮ–5, ಉತ್ತಮ–4, ಸಾಧಾರಣ–3 | ಗರಿಷ್ಠ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | ಸಂಭಾಷಣೆ ರೂಪದ ಬರೆವಣಿಗೆ ಕಲೆ | 5 | |
| 2 | ಸಂಭಾಷಣೆಯನ್ನು ಲೇಖನಕ್ಕೆ ಪರಿವರ್ತಿಸುವ ಸಾಮರ್ಥ್ಯ | 5 | |
| 3 | ಎರಡು ಬರೆಹಗಳಲ್ಲಿನ ಪದ ಬಳಕೆ, ವಾಕ್ಯ ರಚನಾ ಶೈಲಿ | 5 | |
| | ಒಟ್ಟು ಅಂಕಗಳು | 15 | |

## ಮೌಲ್ಯಮಾಪನ ಚಟುವಟಿಕೆ
## ಕಲಿಕಾ ಫಲ – 11

**ಅ) ಈ ಕಥೆಯನ್ನು ಓದಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

ರಸ್ತೆಯಲ್ಲಿ ಜನವೋ ಜನ, ಗುಂಪು ಗೂಡಿ ಹೊಡಿ, ಹೊಡಿ ಎಂಬ ಗದ್ದಲದ ಶಬ್ಧ ದೂರದಲ್ಲಿ ಬರುತ್ತಿದ್ದ ಮೇರಿಗೆ ಕೇಳಿಸಿತು. "ಅಲ್ಲಿ ಏನೋ ನಡೆಯುತ್ತಿದೆ" ಎಂದು ಗುಂಪಿದ್ದಲ್ಲಿಗೆ ಮೇರಿ ಧಾವಿಸಿ ಬರುತ್ತಿದ್ದಳು. ಹತ್ತಿರ ಹತ್ತಿರ ಬರುತ್ತಿದ್ದಂತೆ ಮಗುವಿನ ಕಿರುಚಾಟ ಕೇಳಿಸತೊಡಗಿತು. ಮೇರಿ ಇನ್ನು ಜೋರಾಗಿ ಓಡಿ ಬಂದು ಜನರ ಮಧ್ಯೆ ಸಿಕ್ಕಿ, ಒದೆ ತಿನ್ನುತ್ತಿದ್ದ ಶಶಾಂಕನನ್ನು ಬಿಡಿಸಲು ಪ್ರಯತ್ನ ಮಾಡಿ ಯಶಸ್ವಿಯಾದಳು, ಆದರೆ ಅಷ್ಟರಲ್ಲಿ ಮೇರಿಗೂ ಕೂಡ ಸಣ್ಣಪುಟ್ಟ ಗಾಯಗಳಾಗಿದ್ದವು. ಇದನ್ನು ಲೆಕ್ಕಿಸದ ಮೇರಿ "ಮಗುವನ್ನು ಯಾಕೆ ಹೊಡೆಯುತ್ತಿದ್ದೀರಾ? ಅವನು ಏನು ತಪ್ಪು ಮಾಡಿದ್ದಾನೆ?" ಎಂದು ಅಲ್ಲಿದ್ದ ಜನರನ್ನು ಪ್ರಶ್ನೆ ಮಾಡಿದಳು. ಗುಂಪಿನಲ್ಲಿದ್ದ ದಢೂತಿ ದೇಹದ ನಾಗಣ್ಣ "ರೀ ಈ ಹುಡುಗ ನಿಮ್ಮವನಾ ಇಂಥ ಕೆಲಸ ಮಾಡಲು ನೀವು ಹೇಳಿಕೊಟ್ಟಿದ್ರಾ" ಎಂದು ಹಲ್ಲು ಕಡಿಯುತ್ತಾ ಸಿಟ್ಟಿನಿಂದ ಗದರಿಸಿದನು. ಮೇರಿ "ಸರ್ ಹುಡುಗ ನಮ್ಮವನಲ್ಲಾ, ಇರಲಿ ಅವನು ಏನ್ ತಪ್ಪು ಮಾಡಿದ?" ಎಂದು ಮರು ಪ್ರಶ್ನೆಯನ್ನು ಹಾಕಿದಳು. "ಇವನು ಇದ್ದನಲ್ಲಾ ನಾನು ಅಂಗಡಿಯಲ್ಲಿ ಸಾಮಾನುಗಳನ್ನು ಜೋಡಿಸುವಾಗ ಮೆಲ್ಲನೆ ಬಂದು ಬಿಸ್ಕೆಟ್ ಪ್ಯಾಕ್ ಕದಿತನಲ್ಲಾ, ಇದು ಸರಿಯೇ, ಈಗ ಬುದ್ದಿ ಕಲಿಸದಿದ್ದರೆ ಮುಂದೆ ದೊಡ್ಡ ಕಳ್ಳನಾಗುತ್ತಾನೆ" ಎಂದು ಕೋಪದಿಂದ ಹೇಳಿದ. "ಇಷ್ಟಕ್ಕೆ ಇವನಿಗೆ ಹೀಗೆ ಹೊಡೆಯುವುದಾ? ಬಟ್ಟೆ ಎಲ್ಲಾ ಹರಿದು ಹೋಗಿದೆ. ರಕ್ತ ಬರುವ ಹಾಗೆ. ನೀವು ಮನುಷ್ಯರಾ?" ಎಂದು ಮೇರಿ ಮರು ವಾದಿಸಿದಳು. ಇದಕ್ಕೆ ಕುಪಿತಗೊಂಡ ನಾಗಣ್ಣ "ಏ ಮೇಡಂ ಬಿಸ್ಕೇಟ್‌ನ ದುಡ್ಡು ನೀನು ಕೊಡ್ತೀಯಾ?" ಎಂದನು. ಆಗ ಮೇರಿ ತನ್ನ ಬ್ಯಾಗ್‌ನಿಂದ 50 ರೂಪಾಯಿ ನೋಟ್ ಅನ್ನು ತೆಗೆದು ನಾಗಣ್ಣನ ಮುಖಕ್ಕೆ ಹಿಡಿದಳು, ನಾಗಣ್ಣ ಹಲ್ಲನ್ನು ಕಿರಿಯುತ್ತಾ ಚಿಲ್ಲರೆ ಇಲ್ಲವಲ್ಲ ಮೇಡಂ ಎಂದು ಹಣವನ್ನು ಗಲ್ಲದ ಪೆಟ್ಟಿಗೆಯಲ್ಲಿ ಹಾಕಿದ. ಮೇರಿ, ಶಶಾಂಕನನ್ನು ಸಮಾಧಾನಪಡಿಸುತ್ತಾ "ಮಗು ಯಾಕೆ ನೀನು ಕದ್ದೆ?" ಎಂದು ಕೇಳಿದಳು. ಆಗ ಶಶಾಂಕನು "ಮೇಡಂ ನಾನು ನನ್ನ ಅಮ್ಮ ಇದ್ದೇವೆ. ಅಮ್ಮನಿಗೆ ಮೈ ಹುಷಾರಿಲ್ಲಾ ಹಾಸಿಗೆ ಹಿಡಿದಿದ್ದಾಳೆ, ಮನೆಯಲ್ಲಿ ಅಡುಗೆ ಮಾಡಿ ನಾಲ್ಕು ದಿನವಾಗಿದೆ. ಅಡುಗೆ ಮಾಡಲು ಮನೆಯಲ್ಲಿ ಏನು ಇಲ್ಲಾ, ಹಾಗೆ ನನ್ನ ಹತ್ತಿರ ಹಣ ಇಲ್ಲ. ಹೊಟ್ಟೆ ತುಂಬಾ ಹಸಿವು, ಅದಕ್ಕೆ ಬಿಸ್ಕೆಟ್ ಅನ್ನು ಕದ್ದೆ" ಎಂದನು. ಮೇರಿಗೆ ಶಶಾಂಕನ ಪರಿಸ್ಥಿತಿ ನೋಡಿ ಕಣ್ಣಲ್ಲಿ ನೀರು ತುಂಬಿತು. "ಸರಿ ಶಶಾಂಕ ನಿಮ್ಮ ಮನೆಗೆ ಹೋಗೋಣ ನಡಿ" ಎಂದು ಶಶಾಂಕನ ಮನೆಯ ಕಡೆಗೆ ಹೆಜ್ಜೆ ಹಾಕಿದರು.

1) ಶಶಾಂಕನು ತನ್ನ ಹಸಿವನ್ನು ನೀಗಿಸಿಕೊಳ್ಳಲು ಕಂಡುಕೊಂಡ ದಾರಿ ಸರಿಯೇ? ಹಾಗಾದರೆ ಅವನು ಏನು ಮಾಡಬಹುದಿತ್ತು? ಪಟ್ಟಿ ಮಾಡಿ.

| |
|---|
| |
| |
| |
| |
| |
| |
| |
| |

